ಮ್ಯಾಚ್ ಮಾಡುತ್ತಾ ಎಲ್ಲದರಲ್ಲೂ ಹೊಸತನ ತುಂಬುವ ನಿರಂತರ ಪ್ರಯತ್ನ ನನ್ನದು.

◆ **ವೆಬ್ ಸೀರೀಸ್ ಮಾಧ್ಯಮ ಆಯ್ಕೆಗೆ ಕಾರಣ?**

ಕನ್ನಡ ಸಿನಿಮಾ ಕ್ಷೇತ್ರದಲ್ಲಿ ದೊಡ್ಡ ಸ್ಟಾರ್ ನಟರನ್ನು ಬಿಟ್ಟರೆ ಕೆಲವೇ ಕೆಲವು ಸಣ್ಣ ನಟರು ಬೆಳಕಿಗೆ ಬರುತ್ತಾರೆ. ಪ್ರಾಮಾಣಿಕವಾಗಿ ಹೇಳುವುದಾದರೆ, ನನ್ನ ಸಿನಿಮಾವನ್ನು ಜನರು ಥಿಯೇಟರ್‌ಗೆ ಬಂದು ನೋಡುತ್ತಾರೆ ಎನ್ನುವ ನಂಬಿಕೆ ನನಗಿಲ್ಲ. ಆ ಒತ್ತಡವೂ ನನಗೆ ಬೇಡ. ಹೀಗಿದ್ದಾಗ, ಜನರನ್ನು ಸುಲಭವಾಗಿ ತಲುಪುವ ಸಾಧನ ವೆಬ್ ಸೀರೀಸ್ ಎನಿಸಿತು. ಈ ವೇದಿಕೆಯಲ್ಲಿ ಇಡೀ ಪ್ರಪಂಚಕ್ಕೇ ತಲುಪಬಹುದು. ಸುಮಾರು ಒಂದೂವರೆ ವರ್ಷದಿಂದ ಇಡೀ ವಿಶ್ವವೇ ಒಟಿಟಿ ಹಾದಿಯಲ್ಲಿದೆ. ಭಾಷೆ, ನಟರು, ಜನಪ್ರಿಯತೆ ಎಲ್ಲವನ್ನೂ ಹೊರತುಪಡಿಸಿ ಶೋ ಗುಣಮಟ್ಟವೊಂದರಿಂದಲೇ ಗೆಲ್ಲಲು ಇಲ್ಲಿ ಸಾಧ್ಯ. ಈ ಟ್ರೆಂಡ್ ಅನ್ನೇ ಕನ್ನಡದಲ್ಲಿ ಬಳಸಿಕೊಂಡೆವು. ನನ್ನ ಹಿಂದಿನ ಸಿನಿಮಾ 'ಫ್ರೆಂಚ್ ಬಿರಿಯಾನಿ' ಕೂಡ ನೇರ ಒಟಿಟಿಯಲ್ಲಿಯೇ ಬಿಡುಗಡೆಗೊಂಡಿತು. ಮುಂದಿನ ಸಿನಿಮಾ ಕೂಡ ಒಟಿಟಿಯಲ್ಲಿ ತೆರೆ ಕಾಣಲಿದೆ.

## ಹಂಬಲ್ ಪೊಲಿಟಿಶಿಯನ್ ನೋಗ್‌ರಾಜ್ ಜೊತೆ ನಗೆಮಾತು

◆ **'ಹಂಬಲ್ ಪೊಲಿಟಿಶಿಯನ್ ನೋಗ್‌ರಾಜ್' ವೆಬ್ ಸರಣಿಯಲ್ಲಿ ಜನರು ಏನನ್ನು ನಿರೀಕ್ಷಿಸಬಹುದು?**

ಹೊಸ ಲವಲವಿಕೆಯ ಸ್ಕ್ರಿಪ್ಟ್ ಜೊತೆಗೆ ನಿರಂತರ ನಗು ನಿಮಗೆ ಗ್ಯಾರಂಟಿ. ಹಾಸ್ಯದ ಹೊಸ ರಸಾಯನ ಸಹೃದಯರಿಗೆ. ಸಾದ್ ಖಾನ್ ನಿರ್ದೇಶನದ ಈ ಸರಣಿಯಲ್ಲಿ ಹತ್ತು ಎಪಿಸೋಡ್‌ಗಳಿವೆ. ಪ್ರತಿ ಎಪಿಸೋಡ್ 22–30 ನಿಮಿಷ ಇರಲಿದೆ. ಒಟಿಟಿಯಲ್ಲಿ 'ಬಿಂಜ್ ವಾಚಿಂಗ್' ಜನಪ್ರಿಯವಷ್ಟೇ. ಒಮ್ಮೆ ವೆಬ್ ಸರಣಿ ನೋಡಲು ಆರಂಭಿಸಿದರೆ, ಬಿಡುವು ತೆಗೆದುಕೊಳ್ಳದೇ ಎಲ್ಲಾ ಎಪಿಸೋಡ್‌ಗಳನ್ನೂ ನಿರಂತರ ನೋಡುವುದಕ್ಕೆ 'ಬಿಂಜ್ ವಾಚಿಂಗ್' ಎಂದರ್ಥ. ಈ ಸೀರೀಸ್ ಕೂಡ ಪ್ರೇಕ್ಷಕರನ್ನು ಹಾಗೆ ಹಿಡಿದಿಟ್ಟುಕೊಳ್ಳುವುದು ಖಚಿತ. ಸಿನಿಮಾಗಿಂತ ವೆಬ್ ಸರಣಿಯಲ್ಲಿ ನಮಗೆ ಸಾಕಷ್ಟು ಸಮಯಾವಕಾಶ ಇರುತ್ತದೆ. ಇಲ್ಲಿ ಹಲವು ವಿಷಯಗಳನ್ನು ಸಿನಿಮಾಗಿಂತ ಹೆಚ್ಚು ವಿಶದವಾಗಿ ಹೇಳಬಹುದು. ಈ ಅವಕಾಶವನ್ನು ನಾವು ಚೆನ್ನಾಗಿ ಬಳಸಿಕೊಂಡಿದ್ದೇವೆ. ಪ್ರಕಾಶ್ ಬೆಳವಾಡಿ, ವಿಜಯ್ ಚೆಂಡೂರ್, ದಿಶಾ ಮದನ್, ಗೀತಾಂಜಲಿ ಕುಲಕರ್ಣಿ, ಟಿಕು ತಲ್ಸಾನಿಯಾ, ವರುಣ್ ಠಾಕುರ್, ಶಾಲಿನಿ, ರಘು, ಶಿವಕುಮಾರ್ ಆರಾಧ್ಯ – ಹೀಗೆ ಕಲಾವಿದರ ದಂಡೇ ಇದೆ. ಅಪ್ಲಾಸ್ ಎಂಟರ್ ಟೈನ್‌ಮೆಂಟ್, ಫಸ್ಟ್ ಆಕ್ಷನ್ ಸ್ಟುಡಿಯೋಸ್ ಸೀರೀಸ್ ನಿರ್ಮಾಣ ಮಾಡುತ್ತಿದೆ.



◆ **ಸಿನಿಮಾ ಆಯ್ಕೆ ವಿಚಾರದಲ್ಲಿ ನಿಮ್ಮ ಆದ್ಯತೆ?**

ನನ್ನ ಉದ್ದೇಶ ಸರಳ. ನಾನು ನನ್ನದೇ ರೀತಿಯಲ್ಲಿ ಕಥೆ ಹೇಳಬೇಕು. ಒಳ್ಳೆ ನಿರ್ದೇಶಕರ ಜೊತೆ ಕೆಲಸ ಮಾಡಬೇಕು. ಇಂಥದ್ದೇ ಕಥೆ ಹೇಳಬೇಕೆಂಬ ಕಟ್ಟುನಿಟ್ಟಿಲ್ಲ. ಹೊಸ ಆಲೋಚನೆಗಳಿಗೆ ತೆರೆದುಕೊಳ್ಳಲು ಸದಾ ಸಿದ್ಧ. ಕಾಲದೊಂದಿಗೆ, ಪ್ರಪಂಚವನ್ನು ನೋಡುವ ರೀತಿಯೂ ಬದಲಾಗಬೇಕಲ್ಲವೇ? ನನ್ನ ಆಲೋಚನೆ, ಮ್ಯಾನರಿಸಂ ಕೂಡ ಅದರಂತೆ ಬದಲಾಗಬಹುದು. ಕಾಮಿಡಿ ಸಿನಿಮಾಗಳು ಇಂದಿಗೆ ಇಷ್ಟವಾಗುತ್ತಿವೆ. ಇನ್ನು ಕೆಲವು ವರ್ಷ ಹೋದರೆ ಗಂಭೀರ ಪಾತ್ರಗಳನ್ನು ಮಾಡಬಹುದು.

ಕಥೆ, ಪರಿಕಲ್ಪನೆ, ಕ್ರಿಯಾಶೀಲತೆಗೆ ನನ್ನ ಆದ್ಯತೆ. ಸಿನಿಮಾ ಗೆಲ್ಲಲು ಸಿದ್ಧಸೂತ್ರವಿಲ್ಲ. ಯಾವುದು ಯಾವಾಗ ಗೆಲ್ಲುತ್ತದೆ ಎಂಬುದನ್ನು ಅಂದಾಜು ಮಾಡುವುದು ಕಷ್ಟ. ಎಷ್ಟೋ ವರ್ಷಗಳಿಂದ ಸಾವಿರಾರು ಜನ ಸಿನಿಮಾ ಮಾಡುತ್ತಾ ಬಂದಿದ್ದಾರೆ. ಯಾರಿಗೂ ನಿರಂತರವಾಗಿ ಆ ಸೂತ್ರ ಒಲಿದಿಲ್ಲ. ಆದರೆ ಈ ಸಿನಿಮಾ ಗೆಲ್ಲಬಹುದು ಎಂಬ ಧೈರ್ಯ, ಒಳನೋಟ ಒಮ್ಮೊಮ್ಮೆ ಕೆಲಸ ಮಾಡಿಬಿಡುತ್ತದೆ.

◆ **ನಿಮ್ಮ ಭಾಷಾ ವೈಖರಿ, ಅದನ್ನು ಕರಗತ ಮಾಡಿಕೊಂಡ ಬಗೆಗೆ ಹೇಳಿ.**

ಚಿಕ್ಕ ವಯಸ್ಸಿನಿಂದಲೂ ಜನರನ್ನು ನೋಡುವುದು, ಅವರ ಮಾತು ಕೇಳುವುದು ನನಗೆ ತುಂಬಾ ಇಷ್ಟ. ಕ್ಯಾಮೆರಾ ಹೊರತಾಗಿ ನಾನು ಹೆಚ್ಚು ಮಾತನಾಡುವುದಿಲ್ಲ. ಆದರೆ ಮಾತನಾಡುವುದನ್ನು ಗಮನಿಸುತ್ತಿರುತ್ತೇನೆ. ಹೀಗಾಗಿ ಜನರಿಂದ ನೋಡಿ ಕಲಿತದ್ದೇ ಹೆಚ್ಚು. ಎಲ್ಲಿಗೇ ಹೋದರೂ ಅಲ್ಲಿನ ಜನರನ್ನು, ಅವರ ಭಾಷೆಯನ್ನು, ಅವರು ಮಾತನಾಡುವ ಶೈಲಿಯನ್ನು ಗಮನಿಸುತ್ತಿರುತ್ತೇನೆ. ಅದೇ ನನಗೆ ಸಹಾಯ ಮಾಡಿದೆ.

◆ **ನಿಮ್ಮ ಸಹೋದರಿ ಕುಬ್ರಾ ಸೇಠ್ ಕೂಡ ನಟಿ. ನಟನೆ ಕುರಿತ ಚರ್ಚೆಗಳು ಮನೆಯಲ್ಲಿಯೂ ನಡೆಯುತ್ತವೆಯೇ?**

ನಟನೆ, ಸಿನಿಮಾ ಕುರಿತ ಚರ್ಚೆಗಳು ಮನೆಯಲ್ಲಿ ಸಾಮಾನ್ಯವಾಗಿ ನಡೆಯುವುದಿಲ್ಲ. ಅಕ್ಕನ ಆಯ್ಕೆ, ನನ್ನ ಆಯ್ಕೆಗಳು ಬೇರೆ ಬೇರೆ. ನನ್ನ ಜೀವನದ ರೀತಿಯೇ ಬೇರೆ. ನಾನು ಒಂದು ಸಿನಿಮಾ ಆರಂಭವಾಯಿತೆಂದರೆ ಅದರ ಪ್ರತಿ ಹಂತದಲ್ಲಿಯೂ ಸಕ್ರಿಯವಾಗಿ ಬೆರೆಯುತ್ತೇನೆ. ಬರವಣಿಗೆ, ನಿರ್ಮಾಪಕರ ಜೊತೆ ಚರ್ಚೆ, ಪ್ರೊಡಕ್ಷನ್ ಬಜೆಟ್, ಕಥೆ ಬೆಳೆಸುವುದು – ಹೀಗೆ ಎಲ್ಲಾ ಹಂತದಲ್ಲೂ ತೊಡಗಿಕೊಳ್ಳುತ್ತೇನೆ. ಒಮ್ಮೊಮ್ಮೆ ಸಿನಿಮಾ, ವೆಬ್ ಸರಣಿ ಎಲ್ಲಾ ಬಿಟ್ಟು ಪಕ್ಕಕ್ಕೆ ಸರಿದು ಕ್ರಿಕೆಟ್ ಕಡೆ ಹೊರಟು ಬಿಟ್ಟಿರುತ್ತೇನೆ. ಆದರೆ ಕೆಲವು ಖಾಸಗಿ ವಿಷಯಗಳಲ್ಲಿ, ಜೀವನಕ್ಕೆ ಅಗತ್ಯವಾದ ಕೆಲವು ಪ್ರಶ್ನೆಗಳಿಗೆ ಅಕ್ಕನಿಂದ ಸಲಹೆ ಪಡೆದುಕೊಳ್ಳುತ್ತೇನೆ.

◆ **ನಿಮ್ಮ ಮುಂದಿನ ಸಿನಿಮಾಗಳು?**

ಈ ವೆಬ್ ಸರಣಿ ಆಗುತ್ತಿದ್ದಂತೆ ಸಿನಿಮಾವೊಂದು ಬಿಡುಗಡೆ ಆಗುತ್ತಿದೆ. ಮತ್ತೊಂದು ಸಿನಿಮಾ ಸಿದ್ಧವಾಗುತ್ತಿದೆ. ಐಪಿಎಲ್ ಇದೆ. ಆಸ್ಟ್ರೇಲಿಯಾದಲ್ಲಿ ವರ್ಲ್ಡ್ ಕಪ್ ಇದೆ... ಎಲ್ಲದಕ್ಕೂ ನಾನು ರೆಡಿ.

ಪ್ರತಿಕ್ರಿಯಿಸಿ: feedback@sudha.co.in